# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿನಾಂಕ:೧/೬/೧೯೮೭ ರಿಂದ ದಿನಾಂಕ:೩೧/೩/೧೯೯೨ರ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳ ವತಿಯಿಂದ ಪ್ರಾರಂಭಿಸಿ ಸಹಜವಾಗಿ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳಿಗೆ ವೇತನಾನುದಾನ ನೀಡುವ ಬಗ್ಗೆ.

**ಓದಲಾಗಿದೆ:**

೧) ಸರ್ಕಾರಿ ಆದೇಶ ಸಂಖ್ಯೆ: ಇಡಿ ೧೪೮ ಎಸ್‌ಓಹೆಚ್ ೮೫(೨) ದಿನಾಂಕ:೪/೬/೧೯೮೬.

೨) ಸರ್ಕಾರಿ ಆದೇಶ ಸಂಖ್ಯೆ: ಇಡಿ ೨೫೨ ಎಸ್‌ಇಪಿ ೯೨ ದಿನಾಂಕ:೭/೪/೧೯೯೪.

೩) ಸರ್ಕಾರಿ ಆದೇಶ ಸಂಖ್ಯೆ: ಇಡಿ ೨೬ ಎಸ್‌ಇಪಿ ೯೬ ದಿನಾಂಕ:೮/೨/೧೯೯೬.

೪) ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ ೧೭೫ ಪಿಎಂಸಿ ೯೭ ದಿನಾಂಕ:೭/೯/೧೯೯೮ ಮತ್ತು ೨೯/೧೨/೧೯೯೮.

೫) ಆದಿಎಂಸಿ ಶಿಕ್ಷಣ ಸಂಸ್ಥೆ ಇವರ ರಿಟ್ ಅರ್ಜಿ ಸಂಖ್ಯೆ:೧೫೪೩೬/೯೭ರಲ್ಲಿ ರಾಜ್ಯ ಉಚ್ಛ ನ್ಯಾಯಾಲಯವು ನೀಡಿರುವ ಆದೇಶ ದಿನಾಂಕ:೧೧/೯/೧೯೯೮.

೬) ಶ್ರೀ ರಾಮಾಂಜನೇಯ ಶಿಕ್ಷಣ ಸಂಸ್ಥೆ, ಶಿವಮೊಗ್ಗ ಇವರು ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ:೩೫೪೭/೯೭ರಲ್ಲಿ ರಾಜ್ಯ ಉಚ್ಛ ನ್ಯಾಯಾಲಯವು ನೀಡಿದ ಆದೇಶ ದಿನಾಂಕ:೯/೧೨/೧೯೯೯.

೭) ಶ್ರೀ ಚಂದ್ರಪ್ಪ, ಮುಖ್ಯ ಶಿಕ್ಷಕರು, ಶ್ರೀ ಗವಿಗಂಗನಾಥಸ್ವಾಮಿ ಹಿರಿಯ ಪ್ರಾಥಮಿಕ ಶಾಲೆ, ಕೋಲೆ, ಚಿತ್ರದುರ್ಗ ಜಿಲ್ಲೆ ಮತ್ತಿತರರ ರಿಟ್ ಅರ್ಜಿ ಸಂಖ್ಯೆ:೨೦೧೯೪-೨೦೨೨೯/೨೦೦೦ರಲ್ಲಿ ರಾಜ್ಯ ಉಚ್ಛ ನ್ಯಾಯಾಲಯವು ನೀಡಿರುವ ಆದೇಶ ದಿನಾಂಕ:೩/೭/೨೦೦೦.

೮) ಶ್ರೀ ಬಿ.ಟಿ.ಸಿದ್ಧಪ್ಪ ಮತ್ತಿತರರು ಸಲ್ಲಿಸಿದ ರಿಟ್ ಅಪೀಲು ಸಂಖ್ಯೆ:೫೧೧೫-೫೩೮/೨೦೦೦ ಇದಕ್ಕೆ ಸಂಬಂಧಿಸಿದ ರಿಟ್ ಅಪೀಲು ಸಂಖ್ಯೆ:೬೨೯೬/೨೦೦೦, ರಿಟ್ ಅಪೀಲುಗಳ ಸಂಖ್ಯೆ:೫೮೦೯-೫೮೨೦/೨೦೦೦ ಮತ್ತು ರಿಟ್ ಅಪೀಲು ಸಂಖ್ಯೆ:೬೮೨/೨೦೦೦ರಲ್ಲಿ ರಾಜ್ಯ ಉಚ್ಛ ನ್ಯಾಯಾಲಯವು ನೀಡಿದ ಆದೇಶ ದಿನಾಂಕ:೧೧/೧/೨೦೦೧.

೯) ಜ್ಞಾನಮಂದಿರ ವಿದ್ಯಾ ಸಂಸ್ಥೆ ಮತ್ತು ಇತರರ ಎಸ್.ಎಲ್.ಪಿ (ಸಿವಿಲ್) ಸಂಖ್ಯೆ:೭೬೪೦/೨೦೦೦ ಹಾಗೂ ರಾಜ್ಯ ಸರ್ಕಾರದ ಎಸ್.ಎಲ್.ಪಿ. (ಸಿವಿಲ್) ಸಂಖ್ಯೆ:೮೩೮೮-೮೬೭೩/೨೦೦೧ರಲ್ಲಿ ಭಾರತ ಸರ್ವೋಚ್ಛ ನ್ಯಾಯಾಲಯವು ನೀಡಿರುವ ಆದೇಶ ದಿನಾಂಕ:೧೦/೫/೨೦೦೧.

ಈ ಮೇಲಿನ ಅಂಶಗಳನ್ನು ಖಚಿತಪಡಿಸಿಕೊಂಡು ಶಾಲೆಯನ್ನು ಅನುದಾನಕ್ಕೆ ಒಳಪಡಿಸಲು ಪ್ರಸ್ತಾವನೆಯನ್ನು ಸಂಬಂಧಿತ ತಪಾಸಣಾ ವರದಿ ಹಾಗೂ ೨೦೦೨-೨೦೦೩ನೇ ಸಾಲಿಗೆ ಸಂಬಂಧಿಸಿದಂತೆ ಈ ಕುರಿತು ತಗಲುವ ಒಟ್ಟು ವೆಚ್ಚ ಮತ್ತು ಆಯವ್ಯಯ ಅಂದಾಜಿನಲ್ಲಿ ಲಭ್ಯವಿರುವ ಹಣದ ಬಗೆಗಿನ ಮಾಹಿತಿಯೊಂದಿಗೆ ನಿಗದಿತ ಚೆಕ್‌ಲಿಸ್ಟ್‌ನಲ್ಲಿ ಪೂರ್ಣ ಪ್ರಸ್ತಾವನೆಯನ್ನು ತಮ್ಮ ಖಚಿತ ಶಿಫಾರಸಿನೊಂದಿಗೆ ಸಂಬಂಧಿತ ನಿರ್ದೇಶಕರು, (ಪ್ರಾಥಮಿಕ) / (ಪ್ರೌಢ), ರವರಿಗೆ ಸಂಬಂಧಿತ ಉಪನಿರ್ದೇಶಕರ ಮುಖಾಂತರ ಸಲ್ಲಿಸತಕ್ಕದ್ದು.

೪) ನಿರ್ದೇಶಕರು, ಪ್ರಾಥಮಿಕ/ಪ್ರೌಢ ಇವರು ತಮ್ಮ ಶಿಫಾರಸಿನೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

೫) ಸರ್ಕಾರವು ಸದರಿ ಪ್ರಸ್ತಾವನೆಯ ಬಗ್ಗೆ ಪರಿಶೀಲನೆ ನಡೆಸಿ ಸೂಕ್ತವಾದ ಆದೇಶವನ್ನು ಹೊರಡಿಸುವುದು.

೫. ಈ ಆದೇಶವನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಶಿಕ್ಷಣ ಸಂಸ್ಥೆಗಳಿಗೆ ಅನುದಾನ) ನಿಯಮಗಳು ೧೯೯೮, ಇದಕ್ಕೆ ತಿದ್ದುಪಡಿ ತರುವುದನ್ನು ಬಾಕಿ ಇಟ್ಟು, ಹೊರಡಿಸಲಾಗಿದೆ. ತಿದ್ದುಪಡಿಯನ್ನು ನಂತರ ಪ್ರತ್ಯೇಕವಾಗಿ ಹೊರಡಿಸಲಾಗುವುದು.

೬. ಈ ಆದೇಶವನ್ನು ಆರ್ಥಿಕ ಇಲಾಖೆಯು ಅವರ ದಿನಾಂಕ: ೧೪-೬-೨೦೦೨ರ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ ೪೮೫ ವೆಚ್ಚ-೮/೨೦೦೨ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಅಬ್ದುಲ್ ಖದೀರ್) 13.6.02
ಸರ್ಕಾರದ ಸಹಕಾರ್ಯದರ್ಶಿ,
(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)
ಶಿಕ್ಷಣ ಇಲಾಖೆ.

<u>ಪ್ರಸ್ತಾವನೆ:</u>

೧. ಸ್ಥಳೀಯ ಅಗತ್ಯತೆಗಳಿಗನುಗುಣವಾಗಿ ಶೈಕ್ಷಣಿಕ ಸೌಲಭ್ಯವನ್ನು ನೀಡುವ ದಿಶೆಯಲ್ಲಿ ಸರ್ಕಾರವು ಸಾಕಷ್ಟು ಸಂಖ್ಯೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ತೆರೆಯುವ ಸ್ಥಿತಿಯಲ್ಲಿ ಇಲ್ಲದಿದ್ದ ಸಂದರ್ಭದಲ್ಲಿ ಶಿಕ್ಷಣವನ್ನು ನೀಡುವ ಸರ್ಕಾರದ ಜವಾಬ್ದಾರಿಯಲ್ಲಿ ಸಹಕರಿಸುತ್ತಿದ್ದ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನೆರವು ನೀಡುವ ಉದ್ದೇಶದಿಂದ ಸರ್ಕಾರವು ಅನುದಾನದ ಯೋಜನೆಯನ್ನು ಜಾರಿಗೆ ತಂದಿದೆ. ಸದರಿ ಯೋಜನೆಯನ್ವಯ, ಹಣಕಾಸಿನ ಲಭ್ಯತೆಗೆ ಒಳಪಟ್ಟು ಅನುದಾನಕ್ಕೆ ಒಳಪಡುವ ಖಾಸಗಿ ಶಿಕ್ಷಣ ಸಂಸ್ಥೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಶೇಕಡ ೧೦೦ರಷ್ಟು ವೇತನಾನುದಾನಕ್ಕೆ ಅರ್ಹರಾಗಿರುತ್ತಾರೆ. ಆದಾಗ್ಯೂ, ಸರ್ಕಾರವು ಜೊತೆಯಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಶಾಲೆಗಳನ್ನು ತೆರೆಯಲು ಅಗತ್ಯ ಕ್ರಮಗಳನ್ನು ಕೈಗೊಂಡು ಪ್ರತಿಯೊಂದು ಪ್ರದೇಶದಲ್ಲಿ ಶೈಕ್ಷಣಿಕ ಅಗತ್ಯತೆಗಳನ್ನು ಪೂರೈಸಿದ ಪರಿಸ್ಥಿತಿಯ ಕಾರಣದಿಂದ ಸರ್ಕಾರವು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡುವ ಯೋಜನೆಯನ್ನು ನಿಲ್ಲಿಸುವ ನಿರ್ಧಾರ ಕೈಗೊಂಡಿತು ಹಾಗೂ ಅದರಂತೆ ಮೇಲೆ ಓದಲಾದ ೨ರ ಆದೇಶದಲ್ಲಿ ದಿನಾಂಕ:೧/೬/೧೯೮೭ರಂದು ಮತ್ತು ತದನಂತರ ಪ್ರಾರಂಭಿಸಲಾದ ಎಲ್ಲಾ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಶಾಲಾ ಕಾಲೇಜುಗಳನ್ನು ಶಾಶ್ವತ ಅನುದಾನರಹಿತ ಶಾಲಾ ಕಾಲೇಜುಗಳೆಂದು ಪರಿಗಣಿಸಬೇಕೆಂದು ಆದೇಶ ಹೊರಡಿಸಲಾಯಿತು. ಮೇಲೆ ೩ರಲ್ಲಿ ಓದಲಾದ, ಸರ್ಕಾರವು ಮೇಲಿನ ಆದೇಶವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವತಿಯಿಂದ ನಡೆಸುತ್ತಿರುವ ಶಾಲೆಗಳಿಗೂ ಅನ್ವಯವಾಗುತ್ತದೆ ಎಂಬುದಾಗಿ ಸ್ಪಷ್ಟೀಕರಿಸಿ ತನ್ನ ನೀತಿಯನ್ನು ಪ್ರಕಟಿಸಿತು. ತದನಂತರ, ಉಚ್ಛ ನ್ಯಾಯಾಲಯದ ಆದೇಶ ದಿನಾಂಕ: ೧೧/೯/೧೯೯೮ರಲ್ಲಿ ನೀಡಿದ ನಿರ್ದೇಶನದ ಪ್ರಕಾರ, ಸರ್ಕಾರದ ತನ್ನ ನೀತಿ

ನಿರ್ಧಾರವನ್ನು ಕರ್ನಾಟಕ ಶಿಕ್ಷಣ ಅಧಿನಿಯಮ ೧೯೮೩ರ ಅಡಿಯಲ್ಲಿ ಅಗತ್ಯವಾದ ನಿಯಮಗಳನ್ನು ರಚಿಸಿ ಅಳವಡಿಸಲಾಯಿತು. ಈ ನಿಯಮ ಗಳನ್ವಯ, ದಿನಾಂಕ:೧/೬/೧೯೮೭ರಿಂದು ಮತ್ತು ತದನಂತರ ಪ್ರಾರಂಭವಾದ ಎಲ್ಲಾ ವರ್ಗದ ಶಿಕ್ಷಣ ಸಂಸ್ಥೆಗಳು ಅನುದಾನಕ್ಕೆ ಅರ್ಹತೆ ಪಡೆಯುವುದಿಲ್ಲ. ತದನಂತರ, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ, ಈ ನಿಯಮಗಳಲ್ಲಿ ತಿಳಿಸಿರುವ ಸರ್ಕಾರದ ನೀತಿಯನ್ನು ಪ್ರಶ್ನಿಸಿ ಹಲವಾರು ಖಾಸಗಿ ಶಿಕ್ಷಣ ಸಂಸ್ಥೆಗಳು ರಿಟ್ ಅರ್ಜಿಗಳನ್ನು ಸಲ್ಲಿಸಿದರು. ಈ ಪ್ರಕರಣಗಳ ಎಲ್ಲಾ ವಿವರವಾದ ಅಂಶಗಳನ್ನು ಪರಿಗಣಿಸಿ, ದಿನಾಂಕ:೧/೬/೧೯೮೭ರಿಂದು ಮತ್ತು ತದನಂತರ ಪ್ರಾರಂಭಿಸಲಾದ ಶಾಲೆಗಳನ್ನು ಶಾಶ್ವತ ಅನುದಾನರಹಿತ ಶಾಲೆಗಳೆಂದು ಪರಿಗಣಿಸಿರುವ ಸರ್ಕಾರದ ನೀತಿಯನ್ನು ಹಾಗೂ ದಿನಾಂಕ:೧/೬/೧೯೮೭ರ ಕಟ್-ಆಫ್ (cut-off) ದಿನಾಂಕವನ್ನು ರಿಟ್ ಅರ್ಜಿ ಸಂಖ್ಯೆ:೩೩೪೭/೯೭ರಲ್ಲಿ ರಾಜ್ಯ ಉಚ್ಚ ನ್ಯಾಯಾಲಯವು ನೀಡಿದ ತನ್ನ ಆದೇಶ ದಿನಾಂಕ:೯/೧೨/೧೯೯೯ರಲ್ಲಿ ಎತ್ತಿ ಹಿಡಿದಿದೆ. ಈ ಆದೇಶದ ಅಂಶಗಳ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ, ರಿಟ್ ಅರ್ಜಿ ಸಂಖ್ಯೆ:೨೦೧೯೪-೨೦೨೨೯/೨೦೦೦ ಮತ್ತಿತರ ಪ್ರಕರಣಗಳಲ್ಲಿ ಮತ್ತೆ ಪ್ರಶ್ನಿಸಲಾಯಿತು. ರಾಜ್ಯ ಉಚ್ಚ ನ್ಯಾಯಾಲಯವು ತನ್ನ ದಿನಾಂಕ:೩/೭/೨೦೦೦ರ ತೀರ್ಪಿನಲ್ಲಿ ರಿಟ್ ಅರ್ಜಿಗಳನ್ನು ವಜಾ ಮಾಡಿ, ಈಗಾಗಲೇ ನ್ಯಾಯಾಲಯವು ೧೯೮೭ರ ನಿಯಮದ ಸಿಂಧುತ್ವವನ್ನು ಎತ್ತಿ ಹಿಡಿದಿರುವುದನ್ನು ನ್ಯಾಯಾಲಯವು ಪುನರುಚ್ಚರಿಸಿತು. ಈ ಎರಡೂ ತೀರ್ಪುಗಳ ವಿರುದ್ಧ ವಿಭಾಗೀಯ ಪೀಠದ ಮುಂದೆ ಮೇಲ್ಮನವಿಯಲ್ಲಿ ರಿಟ್ ಅರ್ಜಿ ಸಂಖ್ಯೆ:೩೧೧೩-೩೩೮೭/೨೦೦೦ರಲ್ಲಿ ಮತ್ತೆ ಪ್ರಶ್ನಿಸಲಾಯಿತು. ವಿಭಾಗೀಯ ಪೀಠವು ದಿನಾಂಕ:೧೧/೧/೨೦೦೧ರ ತೀರ್ಪಿನಲ್ಲಿ, ೧೯೮೭ರ ನಿಯಮಗಳ ಸಿಂಧುತ್ವವನ್ನು ಎತ್ತಿ ಹಿಡಿಯಿತಲ್ಲ, ದಿನಾಂಕ:೧/೬/೧೯೮೭ರ ನಂತರ ಪ್ರಾರಂಭವಾದ ಶಾಲಾ ಕಾಲೇಜುಗಳನ್ನು ಶಾಶ್ವತ ಅನುದಾನ ರಹಿತವೆಂದು ಪರಿಗಣಿಸಬೇಕೆಂಬ ಸರ್ಕಾರದ ನೀತಿ ನಿಯಮಗಳನ್ನು ಎತ್ತಿ ಹಿಡಿಯಿತು. ಸದರಿ ವಿಭಾಗೀಯ ಪೀಠದ ವಿರುದ್ಧ

ಮೇಲ್ಮನವಿಯನ್ನು ಸಲ್ಲಿಸಲಾಗಿದ್ದು, ಸರ್ವೋಚ್ಚ ನ್ಯಾಯಾಲಯವು ತನ್ನ ದಿನಾಂಕ:೧೦/೫/೨೦೦೧ರ ಆದೇಶದಲ್ಲಿ ವಿಭಾಗೀಯ ಪೀಠದ ಆದೇಶವನ್ನು ಎತ್ತಿ ಹಿಡಿದಿದೆ. ಈ ಮಧ್ಯೆ, ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಅಪೀಲು ಸಂಖ್ಯೆ:೧೮೩೩ ರಿಂದ ೧೮೩೬/೯೩ ಮತ್ತಿತರ ಪ್ರಕರಣಗಳಲ್ಲಿ ನೀಡಿದ ದಿನಾಂಕ:೩೦/೫/೧೯೯೮ರ ತೀರ್ಪಿನಲ್ಲಿ, ಸಂವಿಧಾನಾತ್ಮಕ ಜವಾಬ್ದಾರಿಯನ್ನು ಪೂರೈಸುವ ದೃಷ್ಟಿಯಿಂದ ಖಾಸಗಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ೧೪ ವರ್ಷದವರೆಗಿನ ಮಕ್ಕಳ ಶೈಕ್ಷಣಿಕ ವೆಚ್ಚವನ್ನು ಮಕ್ಕಳ ಪೋಷಕರಿಗೆ ನೇರವಾಗಿ ತಾವು ಕೋರಿದಲ್ಲಿ ಅಥವಾ ಸಂಬಂಧಪಟ್ಟ ಶಾಲೆಗಳ ಮೂಲಕ ಪೋಷಕರಿಗೆ ಹಿಂಬರಿಸಬೇಕೆಂದು ನಿರ್ದೇಶನ ನೀಡಿತು. ಈ ತೀರ್ಪಿನ ಕಾನೂನು ಮತ್ತು ಆರ್ಥಿಕ ಅಂಶಗಳ ಹಿನ್ನೆಲೆಯಲ್ಲಿ ವಿವರವಾಗಿ ಪರಿಶೀಲಿಸಿ, ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ.ಯನ್ನು ಸರ್ಕಾರ ದಾಖಲಿಸಿತು ಮತ್ತು ಸರ್ವೋಚ್ಚ ನ್ಯಾಯಾಲಯವು ದಿನಾಂಕ:೧/೮/೨೦೦೧ರಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ಈ ನಿರ್ದೇಶನವನ್ನು ತಳ್ಳಿಹಾಕಿದೆ.

೨. ಸರ್ಕಾರದ ನೀತಿ ಮೇಲೆ ವಿವರಿಸಿದ ರೀತಿ ಇದ್ದಾಗ್ಯೂ, ಹಲವಾರು ಪರಿಶಿಷ್ಟ ಜಾತಿ ಮತ್ತು ಪಂಗಡದ ಶಿಕ್ಷಣ ಸಂಸ್ಥೆಗಳೂ ಸೇರಿದಂತೆ, ಎಲ್ಲಾ ಶಿಕ್ಷಣ ಸಂಸ್ಥೆಗಳೂ ತಾವು ಶಾಲಾ ಕಾಲೇಜುಗಳನ್ನು ನಡೆಸಲು ಕಷ್ಟವಾಗಿರುವುದರಿಂದ, ಅನುದಾನ ನೀಡುವಂತೆ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದರು. ಅನುದಾನವನ್ನು ಕೋರಿ, ಶಿಕ್ಷಣ ಸಂಸ್ಥೆಗಳಿಂದ ಬಂದ ಹೆಚ್ಚಿನ ಸಂಖ್ಯೆಯ ಮನವಿಗಳ ಹಿನ್ನೆಲೆಯಲ್ಲಿ, ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ ಅನ್ವಯವಾಗುವಂತೆ ಹಾಗೂ ರಾಜ್ಯ ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾಗಿ ಮತ್ತು ಸಮಗ್ರವಾಗಿ ಅನುದಾನದ ನೀತಿಯನ್ನು ರೂಪಿಸುವ ಪ್ರಶ್ನೆಯನ್ನು ಸರ್ಕಾರ ವ್ಯಾಪಕವಾಗಿ ಪರಿಶೀಲಿಸಿದೆ. ಆ ರೀತಿ ಪರಿಶೀಲಿಸಿದ ನಂತರ, ಸರ್ಕಾರವು ರಾಜ್ಯದ

ಗಮನಿಸಿ ಪರಿಸ್ಥಿತಿ ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗದವರ ಶೈಕ್ಷಣಿಕ ಮತ್ತು ಸಾಮಾಜಿಕ ಕಲ್ಯಾಣ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಡಳಿತ ಮಂಡಳಿ ವತಿಯಿಂದ ದಿನಾಂಕ:೧/೬/೧೯೮೭ ರಿಂದ ದಿನಾಂಕ:೩೧/೩/೧೯೯೫ರ ಅವಧಿಯಲ್ಲಿ ಪ್ರಾರಂಭಿಸಿ, ಇದುವರೆಗೆ ಸತತವಾಗಿ ನಡೆಸಿಕೊಂಡು ಬರುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳಿಗೆ ವೇತನಾನುದಾನವನ್ನು ನೀಡಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ ೬೩ ವಿವಿಧ ೯೭, ಬೆಂಗಳೂರು,**

**ದಿನಾಂಕ: ೧೩-೯-೨೦೦೩.**

೩. ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ. ಪರಿಶಿಷ್ಟ ಜಾತಿ ಮತ್ತು ಪಂಗಡದ ಶಿಕ್ಷಣ ಸಂಸ್ಥೆಗಳ ವತಿಯಿಂದ ದಿನಾಂಕ: ೧/೬/೧೯೮೭ರಿಂದ ದಿನಾಂಕ: ೩೧/೩/೧೯೯೫ರ ಅವಧಿಯಲ್ಲಿ ಅಧಿಕೃತವಾಗಿ ಪ್ರಾರಂಭಿಸಿ ಸತತವಾಗಿ ನಡೆಸುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರವು ಆದೇಶಿಸಿದೆ:-

೧) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶಿಕ್ಷಣ ಸಂಸ್ಥೆಗಳ ವತಿಯಿಂದ ನಡೆಸುತ್ತಿರುವ ಪ್ರಾಥಮಿಕ / ಪ್ರೌಢ ಶಾಲೆಗಳು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ದಿನಾಂಕ ೧/೬/೧೯೮೭ ರಿಂದ ದಿನಾಂಕ ೩೧/೩/೧೯೯೫ರ ಅವಧಿಯಲ್ಲಿ ಪ್ರಾರಂಭವಾಗಿರಬೇಕು.

೨) ಈ ರೀತಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭವಾದ ಶಾಲೆಗಳನ್ನು ಮಧ್ಯದಲ್ಲಿ ಯಾವುದೇ ವಿಟ ನ.ಶ

೩) ಪ್ರಾಥಮಿಕ / ಪ್ರೌಢ ಶಾಲೆಗಳಲ್ಲಿ ಶೇಕಡ ೫೦ಕ್ಕೆ ಕಡಿಮೆ ಇಲ್ಲದಂತೆ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಬೋಧಕ / ಬೋಧಕೇತರ ನೌಕರರಿರಬೇಕು ಹಾಗೂ ಶೇಕಡ ೫೦ಕ್ಕೆ ಕಡಿಮೆ ಇಲ್ಲದಂತೆ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿರಬೇಕು. ಅಲ್ಲದೆ, ಆಡಳಿತ ಮಂಡಳಿಗಳಲ್ಲಿನ ಸದಸ್ಯರೆಲ್ಲರೂ ಪರಿಶಿಷ್ಟಜಾತಿ ಮತ್ತು ಪಂಗಡದವರಾಗಿರಬೇಕು.

೪) ಇಂತಹ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಅಧಿನಿಯಮದ ಅಡಿಯಲ್ಲಿ ರಚಿತವಾಗಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ಮತ್ತು ನೋಂದಣಿ) ನಿಯಮಾವಳಿ ೧೯೯೭ರ ಪ್ರಕಾರ ನೋಂದಾವಣೆಯಾಗಿರತಕ್ಕದ್ದು ಮತ್ತು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ಮನ್ನಣೆ) ನಿಯಮಗಳು ೧೯೯೯ರ ಪ್ರಕಾರ ಅನುದಾನ ನೀಡುವ ತಾರೀಖಿನಂದು ಮಾನ್ಯತೆಯನ್ನು ಪಡೆಯುವುದು ಕಡ್ಡಾಯವಾಗಿರತಕ್ಕದ್ದು.

೫) ಈ ಶಿಕ್ಷಣ ಸಂಸ್ಥೆಗಳು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಗದೀಕರಣ) ನಿಯಮಾವಳಿ ೧೯೯೫, ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ಮನ್ನಣೆ) ನಿಯಮಗಳು ೧೯೯೯ ಮತ್ತು ಇತರ ಸಂಬಂಧಿತ ನಿಯಮಗಳ ಅಡಿಯಲ್ಲಿ ನಿಗದಿಪಡಿಸಿಯಂತೆ ಕನಿಷ್ಠ ಮೂಲಭೂತ ಸೌಲಭ್ಯಗಳಾದ ಕಟ್ಟಡ, ಪೀಠೋಪಕರಣ, ಬೋಧನೋಪಕರಣ, ಗ್ರಂಥಾಲಯ, ಪ್ರಯೋಗಶಾಲೆ ಮತ್ತು ಆಟದ ಮೈದಾನ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೌಲಭ್ಯ, ಮುಂತಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಹೊಂದಿರಬೇಕು. ಅಲ್ಲದೆ, ಶಾಲೆಯ ಸುತ್ತಮುತ್ತಲಿನ ಪ್ರದೇಶವು ಆರೋಗ್ಯಕರವಾದ ಹಾಗೂ ನಿರ್ಮಲವಾದ ವಾತಾವರಣವನ್ನು ಹೊಂದಿರತಕ್ಕದ್ದು ಮತ್ತು ಮಕ್ಕಳಿಗೆ ಹಾನಿಕರವಾದ ಯಾವುದೇ ರೀತಿಯ ಅನಾರೋಗ್ಯಕರವಾದ ವಾತಾವರಣವನ್ನು ಹೊಂದಿರಬಾರದು. ಮಕ್ಕಳ ಶೈಕ್ಷಣಿಕ ಚಟುವಟಿಕೆ ಉತ್ತಮ ಮಟ್ಟದಲ್ಲಿರಲು ಅಗತ್ಯವಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸತಕ್ಕದ್ದು.

೬) ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮ, ೧೯೯೯ ಮತ್ತು ಇತರ ಸಂಬಂಧಿತ ನಿಯಮಗಳ ಅಡಿಯಲ್ಲಿ ನಿಗದಿಪಡಿಸಿರುವಂತೆ ಮಾದರಿ ಸಿಬ್ಬಂದಿಯನ್ವಯ ನೇಮಕಾತಿ ಮಾಡಿಕೊಂಡಿರಬೇಕು. ಪ್ರತಿಯೊಂದು ತರಗತಿಯಲ್ಲಿ ನಿಗದಿತ ಕನಿಷ್ಠ ಮಟ್ಟದ ವಿದ್ಯಾರ್ಥಿ ಹಾಜರಾತಿ ಸಂಖ್ಯಾಬಲವನ್ನು ಹೊಂದಿರತಕ್ಕದ್ದು. ಪ್ರಾಥಮಿಕ ಶಾಲೆಗಳಿಗೆ ಸಂಬಂಧಪಟ್ಟ ನಿಗದಿತ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತವು ೪೦:೧ ಇರತಕ್ಕದ್ದು. ಪ್ರೌಢ ಶಾಲೆಗಳಿಗೆ ಸಂಬಂಧಪಟ್ಟಂತೆ ಪ್ರತಿಯೊಂದು ತರಗತಿಯಲ್ಲಿ ಕನಿಷ್ಠ ೩೫ ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿ ಇರಲೇಬೇಕು. ನಿಯಮಗಳಲ್ಲಿ ನಿಗದಿಪಡಿಸಿರುವ ಸಿಬ್ಬಂದಿ ಮಾದರಿಯನ್ವಯ ವಿಷಯವಾರು ಸಹಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳತಕ್ಕದ್ದು.

೭) ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳಲ್ಲಿ ಇಂತಹ ನೇಮಕಾತಿ ಮಾಡಿಕೊಂಡಿರುವ ಅಥವಾ ಮಾಡಿಕೊಳ್ಳುವ ಶಿಕ್ಷಕರು ಮತ್ತು ನೌಕರರು ನಿಯಮಗಳಲ್ಲಿ ಸರ್ಕಾರಿ ಶಾಲೆಗಳಲ್ಲಿನ ತತ್ಸಂಬಂಧ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಇತರ ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

೮) ಈಗಾಗಲೇ ನೇಮಕವಾಗಿರುವ ಅಥವಾ ಮುಂದೆ ನೇಮಕವಾಗುವ ಶಿಕ್ಷಕರ ಮತ್ತು ನೌಕರರ ನೇಮಕಾತಿಯು ನಿಗದಿತ ಮಾದರಿ ಮತ್ತು ಮಾರ್ಗಸೂಚಿಗಳನ್ವಯ ಆಗಿರಬೇಕು.

೯) ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ಮಾಡಿಕೊಳ್ಳುವ ನೇಮಕಾತಿಗಳಲ್ಲಿ ಶೇಕಡ ೨೦ರಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡದ ಸಿಬ್ಬಂದಿ ಅನುಪಾತವನ್ನು ಕಡ್ಡಾಯವಾಗಿ ಕಾಯ್ದುಕೊಂಡಿರತಕ್ಕದ್ದು. ಆದಾಗ್ಯೂ, ದಿನಾಂಕ: ೧/೬/೧೯೯೫ಕ್ಕೆ ಪೂರ್ವದಲ್ಲಿ ಮಾಡಿಕೊಳ್ಳಲಾದ ನೇಮಕಾತಿಗಳಲ್ಲಿ ಮೀಸಲಾತಿ ನಿಯಮಗಳ ಉಲ್ಲಂಘನೆಯನ್ನು ಮನ್ನಾ ಮಾಡಲಾಗಿದೆ ಮತ್ತು ಬ್ಯಾಕ್-ಲಾಗ್ ಅನ್ನು ಮುಂದಿನ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭ್ಯರ್ಥಿಗಳನ್ನು ನೇಮಿಸಿಕೊಂಡು ಕಡ್ಡಾಯವಾಗಿ ಸರಿದೂಗಿಸಿಕೊಳ್ಳತಕ್ಕದ್ದು.

೧೦) ಈ ಸಂಸ್ಥೆಗಳಲ್ಲಿ ಮಾಡಿಕೊಂಡ ನೇಮಕಾತಿಗಳನ್ನು ಕರ್ನಾಟಕ ಶಿಕ್ಷಣ ಅಧಿನಿಯಮದ ಅಡಿಯಲ್ಲಿ ರಚಿತವಾಗಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮ ೧೯೯೯ರಲ್ಲಿ ನಿಗದಿಪಡಿಸಿರುವ ನಿಯಮಗಳನ್ವಯ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆಯತಕ್ಕದ್ದು. ಒಂದು ವೇಳೆ, ಈಗಾಗಲೇ ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಅನುಮೋದನೆ ಆಗದಿದ್ದಲ್ಲಿ, ನಿಯಮಗಳಲ್ಲಿ ಪ್ರಸ್ತುತ ನೇಮಕಾತಿಗಳಿಗೆ ಸಂಬಂಧಪಟ್ಟಂತೆ ರಚಿಸಿರುವ ಜಿಲ್ಲಾ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಸದರಿ ನೇಮಕಾತಿಗಳಿಗೆ, ಸದರಿ ಸಮಿತಿಯ ಅನುಮೋದನೆಯನ್ನು ಪಡೆದು ತದನಂತರ ನೇಮಕಾತಿ ಆದೇಶವನ್ನು ಹೊರಡಿಸತಕ್ಕದ್ದು.

೧೧) ಆಡಳಿತ ಮಂಡಳಿಯ ಮಾಲಿಕತ್ವದ ಬಗ್ಗೆ ಯಾವುದೇ ರೀತಿಯ ವ್ಯಾಜ್ಯ ಇರತಕ್ಕದ್ದಲ್ಲ. ಒಂದು ವೇಳೆ ಅಂತಹ ವ್ಯಾಜ್ಯ ಇದ್ದಲ್ಲಿ, ಅಂತಹ ಸಂಸ್ಥೆಗಳು ವೇತನಾನುದಾನಕ್ಕೆ ಅರ್ಹತೆ ಪಡೆಯುವುದಿಲ್ಲ.

೧೨) ಪ್ರೌಢ ಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಸಾಮಾನ್ಯ ಫಲಿತಾಂಶವು ಕಳೆದ ೩ ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕಿಂತ ಸಮನಾಗಿ ಅಥವಾ ಹೆಚ್ಚಿಗೆ ಇರತಕ್ಕದ್ದು.

೧೩) ಕರ್ನಾಟಕ ಸಂಘಗಳ ನೋಂದಣಿ ನಿಯಮಾವಳಿಯಲ್ಲಿ ನಮೂದಿಸಿರುವ ಅವಕಾಶಗಳ ಪ್ರಕಾರ, ಪ್ರತಿ ವರ್ಷ ಆಡಿಟ್ ನಡೆಸಿ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿರಬೇಕು ಹಾಗೂ ಶಿಕ್ಷಣ ಇಲಾಖೆಯ ಮಾಹಿತಿಗಾಗಿ P.T.R. ಮತ್ತು ಸಂಘದ ಕಾರ್ಯಕಾರಿ ಸದಸ್ಯರ ಅಧಿಕೃತ ಪಟ್ಟಿಯನ್ನು (ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಲ್ಪಟ್ಟಿರಬೇಕು) ಸಲ್ಲಿಸತಕ್ಕದ್ದು.

೪. **ಪರಿಶಿಷ್ಟ ಜಾತಿ ಮತ್ತು ಪಂಗಡದ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಅನುಸರಿಸಬೇಕಾದ ಕಾರ್ಯವಿಧಾನಗಳು:-**

೧) ದಿನಾಂಕ ೧/೬/೧೯೮೭ ರಿಂದ ೩೧/೫/೧೯೯೫ರ ಒಳಗೆ ಪ್ರಾರಂಭವಾಗಿರುವ ಪರಿಶಿಷ್ಟ ಜಾತಿ ಮತ್ತು ವರ್ಗದ ಆಡಳಿತ

ಮುಂದಳಿಯ ಶಾಲೆಗಳು (ಪ್ರಾಥಮಿಕ ಮತ್ತು ಪ್ರೌಢ) ನಿಗದಿತ ನಮೂನೆಯಲ್ಲಿ ಅನುದಾನ ಕೋರಿ ಅರ್ಜಿ ಸಲ್ಲಿಸತಕ್ಕದ್ದು. ನಮೂನೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸತಕ್ಕದ್ದು. ಅಪೂರ್ಣ ಮಾಹಿತಿಯನ್ನು ಹೊಂದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಪೂರ್ಣ ಮಾಹಿತಿಗಳನ್ನೊಳಗೊಂಡ ಅರ್ಜಿಯನ್ನು ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

೩) ಪೂರ್ಣ ಮಾಹಿತಿಗಳುಳ್ಳ ಅರ್ಜಿಯನ್ನು ಸ್ವೀಕರಿಸಿದ ಕೂಡಲೇ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಕೆಳಗೆ ಸೂಚಿಸಿರುವ ೪ ಸದಸ್ಯರನ್ನೊಳಗೊಂಡ ತಪಾಸಣಾ ಸಮಿತಿಯ ಮುಂದೆ ಮಂಡಿಸತಕ್ಕದ್ದು:-

***ತಪಾಸಣಾ ಸಮಿತಿ:***

i) ಸಂಬಂಧಿತ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್. – ಅಧ್ಯಕ್ಷರು

ii) ಸಂಬಂಧಪಟ್ಟ ಉಪನಿರ್ದೇಶಕರು – ಸದಸ್ಯರು

iii) ಸಂಬಂಧಪಟ್ಟ ಜಿಲ್ಲಾ ನೋಂದಣಾಧಿಕಾರಿಗಳು ಸದಸ್ಯರು

iv) ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು – ಸದಸ್ಯ ಕಾರ್ಯದರ್ಶಿ

೪) ತಪಾಸಣಾ ಸಮಿತಿಯು ಶಾಲೆಯ ತಪಾಸಣೆ ನಡೆಸಿ, ಈ ಕೆಳಕಂಡ ಅಂಶಗಳನ್ನು ಖಚಿತಪಡಿಸಿಕೊಳ್ಳತಕ್ಕದ್ದು:-

(ಅ) ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿಗಳು ಸಂಪೂರ್ಣವಾಗಿವೆಯೇ ಹಾಗೂ ಸಮರ್ಪಕವಾಗಿವೆಯೇ ಎಂಬ ಬಗ್ಗೆ; ಮತ್ತು

(ಆ) ಸದರಿ ಶಾಲೆಯು ಈ ಆದೇಶದಲ್ಲಿ ಮತ್ತು ಶಿಕ್ಷಣ ಅಧಿನಿಯಮದ ಅಡಿಯಲ್ಲಿ ರಚಿತವಾಗಿರುವ ನಿಯಮಗಳಲ್ಲಿ ನಿಗದಿಪಡಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸಿದೆಯೇ ಎಂಬ ಬಗ್ಗೆ.